ದಿನಾಂಕಃ 18-05-2026 ರಂದು **ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ಶ್ರೀ. ಆರ್. ಆರ್. ಕೆ. ವಕೀಲರಿಂದ

5. ನನ್ನ ಮಗಳ ಮದುವೆ ಆರೋಪಿ ಮಗನ ಜೊತೆ ಆಗುವ ಮೊದಲೂ ಸಹ ಆರೋಪಿ ನನ್ನ ನೆಂಟರು ಇರುತ್ತಾರೆ. ನನ್ನ ಹೆಂಡತಿ ಶಿಕ್ಷಕಿಯಾಗಿ ಕೆಲಸ ಮಾಡುತ್ತಿದ್ದಾರೆ. ಅವರ ಸಂಬಳ ನೇರವಾಗಿ ಬ್ಯಾಂಕಿಗೆ ಜಮಾ ಆಗುತ್ತದೆ ಎಂದರೆ ಸರಿ. ಅವರು ಯಾರಿಗಾದರೂ ಹಣ ನೀಡಬೇಕಾದರೆ ಬ್ಯಾಂಕಿನಿಂದ ಹಣ ಪಡೆದು ನೀಡಬೇಕು ಎಂದರೆ ಸರಿ. ನನ್ನ ಹೆಂಡತಿಯಿಂದ ಪಡೆದ 2 ಲಕ್ಷ ರೂಪಾಯಿಗಳನ್ನು ನಾವು ಬ್ಯಾಂಕಿನಿಂದಲೇ ವಿತ್‌ಡ್ರಾವ್ ಮಾಡೆದ್ದೇವು. ಅದಕ್ಕೆ ಸಂಬಂಧಿಸಿದ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಬಹುದು.

6. ಸಾಕ್ಷಿಗೆ ಈಗ ಒಂದು ದಾಖಲೆಯನ್ನು ತೋರಿಸಿದ್ದು ಸಾಕ್ಷಿ ಸದರಿ ದಾಖಲೆಯಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸುತ್ತಾರೆ. ಸದರಿ ಸಹಿ ಪ್ರ.ವ.ವರದಿ ಸಂಖ್ಯೆ 22/2023 ರೊಂದಿಗೆ ಲಗತ್ತಿಸಲಾಗಿರುವ ದೂರಿನ ದೃಢೀಕೃತ ನಕಲಿನ ಮೇಲೆ ಇರುತ್ತದೆ. ಸಾಕ್ಷಿ ಸಹಿಯನ್ನು ಗುರುತಿಸಿದ ಕಾರಣ ಪ್ರ.ವ.ವರದಿಯನ್ನು ನಿಡಿ.1 ಎಂದು ಗುರುತಿಸಲಾಯಿತು.

7. ನನಗೆ ಚಂದ್ರಶೇಖರ್ ಎಂಬ ತಮ್ಮ ಇರುತ್ತಾರೆ ಎಂದರೆ ಸರಿ. ಅವರು ಯಾವ ರೀತಿ ಸಹಿ ಮಾಡುತ್ತಾರೆ ಎಂಬುದು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ನನ್ನ ಹಾಗೂ ಆತನ ನಡುವೆ ಮಾತುಕತೆ ಇರುವುದಿಲ್ಲ ಎಂದು ನುಡಿಯುತ್ತಾರೆ. ನನಗೆ ನನ್ನ ತಮ್ಮನ ವ್ಯವಹಾರದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ಆ ರೀತಿ ಕಳೆದ 15 ವರ್ಷಗಳಿಂದ ನನ್ನ ತಮ್ಮನ ವ್ಯವಹಾರದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಆರೋಪಿಗೆ ಸಂಬಂಧಿಸಿದ ಎಲೆಕ್ಟ್ರಿಕ್ ಸ್ಕೂಟರ್ ಶೋರೂಮ್ ನ ಉದ್ಘಾಟನೆಯಲ್ಲಿ ನಾನು ಭಾಗಿಯಾಗಿರಲಿಲ್ಲ ಆದರೆ ಆ ನಂತರದಲ್ಲಿ ನಾನು ಸದರಿ ಶೋರೂಮ್ ಗೆ ಭೇಟಿ ನೀಡಿರುತ್ತೇನೆ.

8. ಸಾಕ್ಷಿಗೆ ಈಗ ಒಂದು ದಾಖಲೆಯನ್ನು ತೋರಿಸಿದ್ದು ಸಾಕ್ಷಿ ಸದರಿ ದಾಖಲೆಯಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸುತ್ತಾರೆ. ಸದರಿ ಸಹಿ ಒಪ್ಪಂದ ಕರಾರು ಪತ್ರದ ಮೇಲೆ ಇದ್ದು, ಸಾಕ್ಷಿ ಸಹಿಯನ್ನು ನೋಡಿ ಗುರುತಿಸಿದ ಕಾರಣ ಒಪ್ಪಂದ ಕರಾರು ಪತ್ರವನ್ನು ನಿಡಿ.2 ಎಂದು, ಸಾಕ್ಷಿಯ ಸಹಿಯನ್ನು ನಿಡಿ.2(ಎ) ಎಂದು ಗುರುತಿಸಲಾಯಿತು. ದಿನಾಂಕಃ 13-04-2023 ರಂದು ರಾಜಿಗೆ ಸಂಬಂಧಿಸಿದಂತೆ ಎರಡು ಕರಾರು ಪತ್ರಗಳನ್ನು ಮಾಡಲಾಗಿತ್ತು ಎಂದರೆ ಸರಿ. ಸಾಕ್ಷಿ ಮುಂದುವರೆದು ಚಂದ್ರಶೇಖರ್ ರವರು ಆರೋಪಿ ಹಾಗೂ ಅವರ ಕುಟುಂಬದವರೊಂದಿಗೆ ಮಾಡಿಕೊಂಡಿರುವ ಕರಾರು ಪತ್ರಕ್ಕೂ ನನಗೂ ಸಂಬಂಧ ಇರುವುದಿಲ್ಲ ಎಂದು ನುಡಿಯುತ್ತಾರೆ. ನಿಡಿ.2 ಕ್ಕೆ ನನ್ನ ತಮ್ಮ ಚಂದ್ರಶೇಖರ್ ಸಹ ಸಹಿ ಮಾಡಿರುತ್ತಾರೆ ಎಂದರೆ ಸರಿ. ನನ್ನ ಮಗಳ ಸಾವಿಗೆ ಸಂಬಂಧಿಸಿದಂತೆ ದಾಖಲಾಗಿರುವ ಪ್ರಕರಣವನ್ನು ರಾಜಿ ಮಾಡಿಕೊಳ್ಳುವ ಸಲುವಾಗಿ ಆರೋಪಿಯು ನನಗೆ 4 ಚೆಕ್ಕುಗಳನ್ನು ನೀಡಿದ್ದು ಆ ಪೈಕಿ ಒಂದನ್ನು ದುರುಪಯೋಗ ಪಡಿಸಿಕೊಂಡು ಈ ಪ್ರಕರಣವನ್ನು ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿ ಮತ್ತು ಅವರ ಕುಟುಂಬದವರೊಂದಿಗೆ ಚಂದ್ರಶೇಖರ್ ರವರು ಕ್ರಯದ ಕರಾರು ಪತ್ರ ಮಾಡಿಕೊಳ್ಳುವ ಸಮಯದಲ್ಲಿ ಮುಂಗಡವಾಗಿ 20 ಲಕ್ಷ ರೂಪಾಯಿಗಳನ್ನು ಪಡೆದುಕೊಂಡಿದ್ದು ನನ್ನಿಂದ ಹಣ ಪಡೆದುಕೊಳ್ಳುವ ಅವಶ್ಯಕತೆ ಅವರಿಗೆ ಇರಲಿಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ.</u>

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು )

ಓದಿ ಹೇಳಿ ಕೇಳಿ ಸರಿ ಇದೆ

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ನಾಗಮಂಗಲ.